**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು –1**

ಸಂಖ್ಯೆ: ಸಿ1(1) ನೌ.ಸೇ.ಆನ್ ಲೈನ್/01/2018–19 ದಿನಾಂಕ:03–05–2019

**–:ಅಧಿಕೃತ ಜ್ಞಾಪನ:–**

ವಿಷಯ:–ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್–ಎ ಮತ್ತು ಬಿ ಅಧಿಕಾರಿಗಳು ಹಾಗೂ ಎಲ್ಲಾ ವೃಂದದ ಭೋಧಕ/ಭೋಧಕೇತರ ನೌಕರರ ಸೇವಾ ಸೌಲಭ್ಯಗಳನ್ನು ಅನ್‌ಲೈನ್ ತಂತ್ರಾಂಶದ ತರಬೇತಿ ಕಾರ್ಯಗಾರ ಹಮ್ಮಿಕೊಂಡಿರುವ ಬಗ್ಗೆ.

ಉಲ್ಲೇಖ:–1. ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಸಂಖ್ಯೆ: ಸಿ1(1) ನೌ.ಸೇ.ಆನ್ ಲೈನ್/01/ 2018–19.ದಿನಾಂಕ:08.04.2019

2. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:29.04.2019

********

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕೃತ ಜ್ಞಾಪನ ದಿನಾಂಕ:08.04.2019 ರಲ್ಲಿದ್ದಂತೆ ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿಯಲ್ಲಿ ಕೆಳಕಂಡ ವಿವಿಧ ಸೇವಾ ಸೌಲಭ್ಯಗಳನ್ನು ಇಲಾಖೆಯ ಎಲ್ಲಾ ವೃಂದದ ಅಧಿಕಾರಿಗಳು ಮತ್ತು ಭೋಧಕ / ಭೋಧಕೇತರ ನೌಕರರಿಗೆ ಒದಗಿಸಬೇಕಿರುತ್ತದೆ.

ಈ ಸೇವೆಗಳನ್ನು ಆನ್‌ಲೈನ್ ತಂತ್ರಾಂಶದ ಮುಖಾಂತರ ಒದಗಿಸಲು ಇಲಾಖೆ ನಿರ್ಣಯಿಸಿದ್ದು, ಈ ಎಲ್ಲಾ ಸೌಲಭ್ಯಗಳನ್ನು ದಿನಾಂಕ:01/05/2019 ರಿಂದ ಜಾರಿಗೆ ಬರುವಂತೆ ಆನ್‌ಲೈನ್ ಮುಖಾಂತರ ನಿರ್ವಹಿಸಿ ಇತ್ಯರ್ಥಪಡಿಸುವುದು ಕಡ್ಡಾಯವಾಗಿರುತ್ತದೆ, ಸೇವೆಗಳ ಅನ್‌ಲೈನ್ ತಂತ್ರಾಂಶದ ಬಳಕೆ ಹೊಸ ವಿಧಾನವಾಗಿರುವುದರಿಂದ ಅನುಷ್ಠಾನ ಅಧಿಕಾರಿಗಳಿಗೆ/ ಸಿಬ್ಬಂದಿಗಳಿಗೆ ಪ್ರಾರಂಭಿಕ ಪರಿಚಯ ಮಾಡಿಕೊಡುವ ಉದ್ದೇಶದಿಂದ ದಿನಾಂಕ:25.04.2019 ರಂದು ನಡೆದ ವಿಡಿಯೋ ಸಂವಾದದಲ್ಲಿ ಮಾನ್ಯ ಆಯುಕ್ತರು ಸೂಚಿಸಿರುವಂತೆ ತಾಲ್ಲೂಕು ಮತ್ತು ಜಿಲ್ಲಾ ಹಂತಗಳಲ್ಲಿ ಸದರಿ ಕಾರ್ಯವನ್ನು ಯಶಸ್ವಿಗೊಳಿಸಲು ಕ್ರಮವಹಿಸ ಬೇಕಾಗಿರುವುದಿಂದ ಆಯುಕ್ತಾಲಯ/ವಿಭಾಗ ಮಟ್ಟದಿಂದ ತಲಾ 12 ಜನ ಸಂಪನ್ಮೂಲ ವ್ಯಕ್ತಿಗಳಿಗೆ ಕೆಳಕಂಡ ದಿನಾಂಕಗಳಂದು ಪ್ರಯೋಗಿಕವಾಗಿ ಅನುಷ್ಠಾನದ ಬಗ್ಗೆ ಎರಡು ದಿನದ ತರಬೇತಿ ನೀಡಲು ತೀರ್ಮಾನಿಸಲಾಗಿದೆ.

ಅದರಂತೆ ಬೆಂಗಳೂರು ವಿಭಾಗದ ಕೆಳಕಂಡ ಅಧಿಕಾರಿ ಸಿಬ್ಬಂದಿಗಳನ್ನು ದಿನಾಂಕ:08.05.2019 ರಿಂದ 09.05.2019 ರಂದು ಪೂರ್ವಾಹ್ನ 10.00 ಗಂಟೆಗೆ ಎಸ್.ಎಸ್.ಎ, ಕಛೇರಿ 4ನೇ ಮಹಡಿ, ನೃಪತುಂಗ ರಸ್ತೆ ಬೆಂಗಳೂರು ಇಲ್ಲಿ ನಡೆಯುವ ಅನ್ ಲೈನ್ ತರಬೇತಿ ಕಾರ್ಯಗಾರಕ್ಕೆ ನಿಯೋಜಿಸಿ ಆದೇಶಿಸಿದೆ. ಸಂಬಂಧ ಪಟ್ಟ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿತ ತರಬೇತಿಗೆ ಸಕಾಲದಲ್ಲಿ ಹಾಜರಾಗಲು ಸೂಚಿಸಿ ಕರ್ತವ್ಯದಿಂದ ಬಿಡುಗಡೆ ಮಾಡಲು ತಿಳಿಸಿದೆ.

ಆಯುಕ್ತರ ಕಛೇರಿಯ ಹಾಗೂ ಎಸ್.ಎಸ್.ಎ ಕಛೇರಿಯ ಆನ್ ಲೈನ್ ತಂತ್ರಾಂಶದ ಸಂಪನ್ಮೂಲ ಅಧಿಕಾರಿಗಳು ಕೆಳಕಂಡ ಸಂಪನ್ಮೂಲ ಅಧಿಕಾರಿ/ ಸಿಬ್ಬಂಧಿಗಳ ಉಸ್ತುವಾರಿ ನಿರ್ವಹಿಸಲು ತಿಳಿಸಿದೆ.

| ಕ್ರಮ ಸಂಖ್ಯೆ | ಜಿಲ್ಲೆ | ನಿಯೋಜಿತ ಅಧಿಕಾರಿ/ಸಿಬ್ಬಂದಿ ವಿವರ |
|---|---|---|
| 01. | ಬೆಂಗಳೂರು ನಗರ ಡಯಟ್ | ಶ್ರೀಮತಿ ವಾಣಿಶ್ರೀ ಕೊಪ್ಪದ ಹಿರಿಯ ಉಪನ್ಯಾಸಕರು |
| 02. | ಬೆಂಗಳೂರು ಉತ್ತರ | ಶ್ರೀ ಸಾವಂತ್, ಅಧೀಕ್ಷಕರು |
| | | ಶ್ರೀ ರುದ್ರೇಶ್, ಪ್ರ.ದ.ಸ |
| 03. | ಬೆಂಗಳೂರು ದಕ್ಷಿಣ | ಶ್ರೀ ಮಹದೇವ್ ಅಧೀಕ್ಷಕರು |
| | | ಶ್ರೀ ವಿಶ್ವನಾಥ್, ಸಿ,ಸಿ,ಟಿ |
| 04. | ಬೆಂಗಳೂರು ಗ್ರಾಮಂತರ | ಶ್ರೀ ಪುಂಡಲೀಕ ಅಧೀಕ್ಷಕರು (ಪ್ರಭಾರ) |

| | | |
|---|---|---|
| | | ಶ್ರೀ ಹನುಮಂತರಾಜು, ದ್ವಿ.ದ.ಸ |
| 05. | ರಾಮನಗರ | ಶ್ರೀ ಎನ್.ಕೆ ಶಿವಕುಮಾರ್ ಅಧೀಕ್ಷಕರು |
| | | ಶ್ರೀ ಶ್ರೀನಿವಾಸ. ಪ್ರ.ದ.ಸ |
| 06. | ಚಿತ್ರದುರ್ಗ | ಶ್ರೀ ಗೋವಿಂದಪ್ಪ, ವಿಷಯ ಪರಿವೀಕ್ಷಕರು. |
| | | ಶ್ರೀ ಸಾಯಿ ಪ್ರಸಾದ್ ಅಧೀಕ್ಷಕರು ಕ್ಷೇ.ಶಿ.ಅ ಚಿತ್ರದುರ್ಗ |
| 07. | ದಾವಣಗೆರೆ | ಶ್ರೀ ಎಂ.ಸಿ ರಾಮಚಂದ್ರ, ಅಧೀಕ್ಷಕರು |
| | | ಶ್ರೀ ಹೆಚ್.ಆರ್. ಮೋಹನ್, ಪ್ರ.ದ.ಸ |
| 08. | ಚಿಕ್ಕಬಳ್ಳಾಪುರ | ಶ್ರೀ ಶ್ರೀಕಾಂತ್, ಪ್ರ.ದ.ಸ |
| | | ಶ್ರೀ ಮಾರುತಿ, ಪ್ರ.ದ.ಸ |
| 09. | ಶಿವಮೊಗ್ಗ | ಶ್ರೀ ಚಂದ್ರಶೇಖರ್, ಪ್ರ.ದ.ಸ |
| | | ಶ್ರೀ ಸುಬ್ರಮಣ್ಯ ಜಾದವ್, ಪ್ರ.ದ.ಸ |
| 10. | ಮಧುಗಿರಿ | ಶ್ರೀ ಮಲ್ಲಿಕಾರ್ಜುನ ಸ್ವಾಮಿ, ಅಧೀಕ್ಷಕರು |
| | | ಶ್ರೀ ಹರ್ಷ, ಪ್ರ.ದ.ಸ |
| 11. | ತುಮಕೂರು | ಶ್ರೀಮತಿ ಕೆ.ಸಿ ಗಿರೀಜಾ ಲೆಕ್ಕಾಧೀಕ್ಷಕರು |
| | | ಶ್ರೀಮತಿ ಶುಭಾ, ದ್ವಿ.ದ.ಸ |
| 12. | ಕೋಲಾರ | ಶ್ರೀ ಸುರೇಶ್ , ಅಧೀಕ್ಷಕರು |
| | | ಶ್ರೀಮತಿ, ಸರಸ್ವತಿ ,ಪ್ರ.ದ.ಸ |

[ಅರುಳ್ ಕುಮಾರ್]
**ಜಂಟಿ ನಿರ್ದೇಶಕರು[ಆಡಳಿತ]**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು. ಇವರ ಮಾಹಿತಿಗಾಗಿ
3. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ವಿಭಾಗದ ಎಲ್ಲಾ ಉಪನಿರ್ದೇಶಕರು(ಆಡಳಿತ)ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ರವರುಗಳಿಗೆ ಮುಂದಿನ ಕ್ರಮಕ್ಕಾಗಿ
4. ಅನ್‌ಲೈನ್ ತಂತ್ರಾಂಶ ಸಂಪನ್ಮೂಲ ಅಧಿಕಾರಿಗಳು ಆಯುಕ್ತರ ಕಛೇರಿ ಹಾಗೂ ಸಮಗ್ರ ಶಿಕ್ಷಣ ಅಭಿಯಾನ ಕಛೇರಿ ಬೆಂಗಳೂರು ರವರಿಗೆ ಮುಂದಿನ ಕ್ರಮಕ್ಕಾಗಿ.
5. ಎಲ್ಲಾ ನೋಡಲ್ ಅಧಿಕಾರಿಗಳು ಅನ್‌ಲೈನ್ ಅನುಷ್ಟಾನ ಉಸ್ತುವಾರಿ ಇವರು ತರಬೇತಿಗೆ ಹಾಜರಾಗಲು ತಿಳಿಸಿದೆ.
6. ಸಂಬಂಧಿಸಿದ ಎಲ್ಲಾ ನಿಯೋಜಿತ ಅಧಿಕಾರಿ ಸಿಬ್ಬಂದಿಗಳಿಗೆ
7. ಕಛೇರಿ ಪ್ರತಿ.